**ಸಾಕ್ಷಿಗೆ ದಿನಾಂಕಃ16-04-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. GNC ವಕೀಲರಿಂದ ::**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. SNM ವಕೀಲರಿಂದ ::**

1 ನೇ ವಾದಿ ನನಗೆ ಸಂಬಂಧದಲ್ಲಿ ಮಾವ ಆಗಬೇಕು. ಪ್ರಾಸಾ 2 ರವರು ನನಗೆ ಸಂಬಂಧದಲ್ಲಿ ಅಳಿಯ ಆಗಬೇಕು. ಸದರಿ ದಾವೆಯನ್ನು ಎಷ್ಟು ಜನ ವಾದಿಗಳು ಎಷ್ಟು ಜನ ಪ್ರತಿವಾದಿಗಳ ವಿರುದ್ದ ಹೂಡಿರುತ್ತಾರೆ ಎಂದು ನನಗೆ ನಿಖರವಾದ ಮಾಹಿತಿ ಇಲ್ಲ. ಸದರಿ ದಾವೆಯನ್ನು ಕಣಬಗಟ್ಟೆ ಗ್ರಾಮದ ಸರ್ವೇ ನಂಬರ್ 39/3 ರಲ್ಲಿನ ಒಂದುವರೆ ವಿಸ್ತೀರ್ಣದ ಆಸ್ತಿಯ ಕುರಿತು ಹೂಡಿಲಾಗಿರುತ್ತದೆ. ಏನು ಪರಿಹಾರ ಕೋರಿ ಈ ದಾವೆಯನ್ನು ಹೂಡಲಾಗಿರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಸಹ ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವಾದಿಗಳ ಹಾಗೂ ಪ್ರತಿವಾದಿಗಳ ನಡುವೆ ರಕ್ತ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಾವ ಗಂಗಾಧರಪ್ಪ ಎಂದರೆ ಸರಿ. ಗಂಗಾಧರಪ್ಪ, ಚಂದ್ರಪ್ಪ, ಶಿವಮೂರ್ತಪ್ಪ ಹಾಗೂ ದೇವಿರಪ್ಪ ಎನ್ನುವವರು ಸಹೋದರರಾಗಿರುತ್ತಾರೆ ಎಂದರೆ ಸರಿ. ಗಂಗಾಧರಪ್ಪ ರವರು ಮಕ್ಕಳು ಕೆ ಜಿ ವೀರಣ್ಣ ಹಾಗೂ ಕೆ ಜಿ ಶಿವಕುಮಾರ್ ಆಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು 18.03.1976 ರಂದು ಗಂಗಾಧರಪ್ಪ ರವರು ಕ್ರಯಕ್ಕೆ ಪಡೆದ ಸ್ವತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಯ ನಂತರದಲ್ಲಿ ಕುಟುಂಬದಲ್ಲಿ ಆದ ಹಿಸ್ಸೆಯ ಅಡಿಯಲ್ಲಿ ದಾವಾ ಆಸ್ತಿಯು ದೇವಿರಪ್ಪ ಬಿನ್ ನಾಗಪ್ಪ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ಗಂಗಾಧರಪ್ಪ ರವರು ಮಕ್ಕಳಾದ ಕೆ ಜಿ ವೀರಣ್ಣ ಹಾಗೂ ಕೆ ಜಿ ಶಿವಕುಮಾರ್ ರವರು 1955 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಗಂಡ ಅಂದರೆ ಕೆ ಜಿ ಶಿವಕುಮಾರ್ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಗಂಡ ಗಂಗಾಧರಪ್ಪ ಆಗಿರುತ್ತಾರೆ

ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಖಾತೆಯು ಹಿಂದೆ 1 ನೇ ವಾದಿಯ ತಾಯಿ ಸಾವಿತ್ರಮ್ಮ ರವರ ಹೆಸರಿನಲ್ಲಿ ನಮುದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆಯು ಕೇವಲ ಕೈ ಬರವಣಿಗೆ ತಪ್ಪಿನಿಂದ ಅವರ ಹೆಸರಿಗೆ ನಮೂದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ತರೀಕೆರೆಯ ಉಪ ವಿಭಾಗಾಧಿಕಾರಿಗಳ ಆದೇಶದಂತೆ ಸದರಿ ತಪ್ಪು ನಮೂದನ್ನು ರದ್ದುಪಡಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ಅಜ್ಜಂಪುರ ತಹಶೀಲ್ದಾರ್ ರವರ ಆದೇಶದಂತೆ ಸ್ಥಳ ತನಿಖೆ ಆಗಿ ದಾವಾ ಆಸ್ತಿಯ ಖಾತೆಯು ಅನ್ನಪೂರ್ಣಮ್ಮ ರವರ ಹೆಸರಿಗೆ ಮತ್ತೆ ನಮೂದು ಆಗಿರುತ್ತದೆ ಎಂದರೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಗಳು ನನ್ನ ಸಂಬಂಧಿಕರಾದ ಕಾರಣ ಹಾಗೂ ಅವರ ಚಿತ್ತಾವಣೆ ಮೇರೆಗ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳು ಯಾವತ್ತು ಸಹ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: